ಕರ್ನಾಟಕ ಸರ್ಕಾರ

ಉಪತಹಶೀಲ್ದಾರರವರ ನ್ಯಾಯಾಲಯ

ಉಪತಹಶೀಲ್ದಾರವರ ನಾಡಕಛೇರಿ, ಹಂಪಸಾಗರ

ಸಂ/ಕಂ/ಪಹಣಿ/ವಿವಾದ/03/2016-17 5.5.16

ಉಪಸ್ಥಿತರು :- ಶ್ರೀ ಎ.ಚಂದ್ರನಾಯಕ, ಉಪತಹಶೀಲ್ದಾರರು
ನಾಡಕಛೇರಿ ಹಂಪಸಾಗರ

| ವಾದಿಗಳು : | ಪ್ರತಿವಾದಿಗಳು : |
|---|---|
| 1) ಶ್ರೀಮತಿ ಬನ್ನಿಗೋಳದ ವಿಶಾಲಾಕ್ಷಿ<br>ಗಂಡ ವಿಠೋಬಪ್ಪ<br>ಗ್ರಾಮ : ಮೋರಗೇರಿ | 1) ಶ್ರೀ ಜುಮ್ಮಣ್ಣನವರ ದೇವೇಂದ್ರಪ್ಪ<br>ತಂದೆ ಯಂಕಪ್ಪ<br>ಗ್ರಾಮ : ಮೋರಗೇರಿ |

**ವಿಷಯ :- ಹಗರಿಬೊಮ್ಮನಹಳ್ಳಿ ತಾಲೂಕು, ಹಂಪಸಾಗರ ಹೋಬಳಿ, ಮೋರಗೇರಿ ಗ್ರಾಮಕ್ಕೆ ಸೇರಿದ ಜಮೀನು ಸ.ನಂ. 308/1 ವಿಸ್ತೀರ್ಣ 1-14 ಎಕರೆ ಜಮೀನು ಕ್ರಯದಸ್ತಾವೇಜು ಪ್ರಕಾರ ಹಕ್ಕು ಬದಲಾವಣೆ ಮಾಡುವ ವಿಷಯದಲ್ಲಿ ತಕರಾರು – ವಿಚಾರಣೆ.**

**ಪೀಠಿಕೆ :-**

ಹಗರಿಬೊಮ್ಮನಹಳ್ಳಿ ತಾಲೂಕು, ಹಂಪಸಾಗರ ಹೋಬಳಿ, ಮೋರಗೇರಿ ಗ್ರಾಮ್ಕಕೆ ಸೇರಿದ ಜಮೀನು ಸ.ನಂ.308/1 ವಿಸ್ತೀರ್ಣ 1-14 ಎಕರೆ ಜಮೀನು ಕ್ರಯ ನೊಂದಣಿ ದಸ್ತಾವೇಜು ಸಂಖ್ಯೆ ಹೆಚ್‌ಬಿಹೆಚ್-1-04231/2015-16/ದಿನಾಂಕ: 27/02/2016 ರಂದು ಹಾಲೀ ಪಹಣಿ ದಾಖಲು ಹಕ್ಕುದಾರರಾದ ಶ್ರೀ ಇಂದ್ರಪ್ಪ ತಂದೆ ಕೋಲಶಾಂತಪ್ಪ ಇವರು ಕ್ರಯದಾರರಾದ ಶ್ರೀಮತಿ ಬನ್ನಿಗೋಳದ ವಿಶಾಲಾಕ್ಷಿ ಗಂಡ ವಿಠೋಬಪ್ಪ ಮೋರಗೇರಿ ಇವರಿಗೆ ಕ್ರಯಕ್ಕೆ ಮಾರಾಟ ಮಾಡಿರುತ್ತಾರೆ. ಕ್ರಯ ವ್ಯವಹಾರವು ಭೂಮಿಕೇಂದ್ರದಲ್ಲಿ ದಾಖಲಾಗಿ ವಹಿವಾಟು ಸಂಖ್ಯೆ 189 ಹಾಗೂ ಹಕ್ಕು ಬದಲಾವಣೆ ಸಂಖ್ಯೆ ಹೆಚ್-73/2016-17 ರಂತೆ ಹಕ್ಕು ಬದಲಾವಣೆಗೆ ಸಂಬಂಧಿಸಿದ ನಮೂನೆ 12 ಹಾಗೂ ನೋಟೀಸು ನಮೂನೆ 21 ಮುಂದಿನ ಕ್ರಮಕ್ಕಾಗಿ ಕಂದಾಯ ನಿರೀಕ್ಷಕರು ಹಂಪಸಾಗರ ಇವರಿಗೆ ರವಾನಿಸಲಾಗಿ ಗ್ರಾಮ ಲೆಕ್ಕಾಧಿಕಾರಿ ಮೋರಗೇರಿ ಇವರ ದ್ವಾರ ಹಕ್ಕು ಬದಲಾವಣೆಗೆ ಸಂಬಂಧಿಸಿದ ನಮೂನೆ 12 ಹಾಗೂ ನೋಟೀಸು ನಮೂನೆ 21ನ್ನು ಜಾರಿ ಮಾಡಿರುತ್ತಾರೆ. ಜಾರಿ ಮಾಡಲಾಗಿ ಸದರಿ ಪ್ರಕರಣಕ್ಕೆ ಶ್ರೀ ಜಮ್ಮಣ್ಣನವರ ದೇವೇಂದ್ರಪ್ಪ ತಂದೆ ಯಂಕಪ್ಪ ಸಾಕಿನ್ ಮೋರಗೇರಿ ಇವರು ಭೂಮಿ ಕೇಂದ್ರದಲ್ಲಿನ ಸ್ವೀಕೃತಿ ಸಂಖ್ಯೆ 7368/2015-16 ರಂತೆ ತಕರಾರು ಸಲ್ಲಿಸಿರುತ್ತಾರೆ. ತಕರಾರು ದಾಖಲಾದ ಹಿನ್ನೆಲೆಯಲ್ಲಿ ಹಾಗೂ ಗ್ರಾಮ ಲೆಕ್ಕಾಧಿಕಾರಿಗಳ ವರದಿ ಪ್ರಕಾರ ಸದರಿ ಪ್ರಕರಣವನ್ನು ಕಂದಾಯ ನಿರೀಕ್ಷಕರು ಹಂಪಸಾಗರ ಇವರು ತಕರಾರು ಪ್ರಕರಣವೆಂದು ಪರಿಗಣಿಸುತ್ತಾ ಮುಂದಿನ ವಿಚಾರಣೆಗಾಗಿ ಈ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ಪ್ರಕರಣವನ್ನು ಈ ಮೇಲಿನ ಸಂಖ್ಯೆಯಂತೆ ದಾಖಲಿಸಿಕೊಂಡು ದಿನಾಂಕ: 12-04-2016 ರಿಂದ ________ ರವರೆಗೆ ವಿಚಾರಣೆ ನಡೆಲಾಯಿತು.

12/05/16

ವಿಚಾರಣೆ ಹಾಗೂ ದಾಖಲಾತಿಗಳನ್ನು ಪರಿಶೀಲಿಸಲಾಗಿ ವಿವಾದಿತ ಆಸ್ತಿಯು ವಿಕ್ರಯದಾರರಿಗೆ ಎಂ.ಆರ್.ಟಿ. 103/2015-16 ದಿನಾಂಕ: 09-02-2016 ರ ಪ್ರಕಾರ ವಿಭಜನೆಯಿಂದ ಹಕ್ಕು ಪ್ರಾಪ್ತವಾಗಿರುವ ಬಗ್ಗೆ ದಾಖಲೆಗಳಿಂದ ಕಂಡುಬರುತ್ತದೆ. ಈ ಪ್ರಕಾರ ಪಹಣಿ ಲೆಕ್ಕ ದಾಖಲು ಹಕ್ಕುದಾರರು ಕ್ರಯಪತ್ರ ಸಂಖ್ಯೆ ಹೆಚ್.ಬಿ.ಹೆಚ್-1-04231/2015-16/ದಿನಾಂಕ: 27-02-2016 ರ ಪ್ರಕಾರ ವಾದಿಗಳಿಗೆ ನೋಂದಣಿ ಮಾಡಿಸಿಕೊಟ್ಟಿರುತ್ತಾರೆ. ಪ್ರತಿವಾದಿಗಳು ತಮ್ಮ ತಕರಾರು ಪತ್ರದಲ್ಲಿ ವಿವಾದಿತ ಆಸ್ತಿಯು ತಮ್ಮ ತಂದೆಯ ಭಾಗಕ್ಕೆ ಬಂದಿರುವುದಾಗಿಯೂ ಹಾಗೂ ತಮಗೂ ಈ ಜಮೀನಿನಲ್ಲಿ ಭಾಗ ಇರುವುದಾಗಿ ತಕರಾರು ಪತ್ರದಲ್ಲಿ ಉಲ್ಲೇಖಿಸಿರುತ್ತಾರೆ. ಆದರೆ ಪಹಣಿಯು ನಿಯಮಾನುಸಾರ ವಿಭಜನೆ ಹೊಂದಿದ್ದು ವಿಭಜನೆಯ ಪ್ರಕಾರ ವಿಕ್ರಯದಾರರಿಗೆ ಹಕ್ಕು ಪ್ರಾಪ್ತವಾಗಿರುವುದರಿಂದ ವಿಭಜನೆಯ ಸಮಯದಲ್ಲಿ ಅಳತೆ ಇತ್ಯಾದಿ ಕೆಲಸಗಳು ನಡೆದಿದ್ದರೂ ಅದಕ್ಕೆ ವಿರೋಧವಿಲ್ಲದಿರುವುದು ವಿಭಜನೆಯ ದಾಖಲೆ ಪ್ರಕಾರ ಕಂಡು ಬರುತ್ತದೆ. ಆದಾಗ್ಯೂ ತಕರಾರುದಾರರು ವಿವಾದಿತ ಜಮೀನಿನ ಮೇಲೆ ಹಕ್ಕು ಇದ್ದಲ್ಲಿ ಅದನ್ನು ಸಿವಿಲ್ ನ್ಯಾಯಾಲಯದಲ್ಲಿ ಪರಿಹರಿಸಿಕೊಳ್ಳಲು ನಿರ್ದೇಶಿಸುತ್ತಾ ಈ ಕೆಳಕಂಡ

## ಆದೇಶ

ಹಗರಿಬೊಮ್ಮನಹಳ್ಳಿ ತಾಲೂಕು, ಹಂಪಸಾಗರ ಹೋಬಳಿ, ಮೋರಗೇರಿ ಗ್ರಾಮಕ್ಕೆ ಸೇರಿದ ಜಮೀನು ಸ.ನಂ. 308/1 ವಿಸ್ತೀರ್ಣ 1-14 ಎಕರೆ ಜಮೀನನ್ನು ನೊಂದಾಯಿತ ಕ್ರಯ ದಸ್ತಾವೇಜು ಸಂಖ್ಯೆ ಹೆಚ್‌ಬಿಹೆಚ್-1-04231/2015-16 ರ ಪ್ರಕಾರ ವಾದಿಗಳಾದ ಶ್ರೀಮತಿ ಬನ್ನಿಗೋಳದ ವಿಶಾಲಾಕ್ಷಿ ಗಂಡ ವಿಠೋಬಪ್ಪ ಮೋರಗೇರಿ ಇವರ ಹೆಸರಿನಲ್ಲಿ ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ ಕಲಂ 128 ಹಾಗೂ 129 ರನ್ವಯ ಹಕ್ಕು ಬದಲಾವಣೆ ಮಂಜೂರು ಮಾಡಿ ಆದೇಶಿಸಿದೆ.

ಉಪ ತಹಶೀಲ್ದಾರರು
ಉಪತಹಶೀಲ್ದಾರರು
ನಾಡಕಛೇರಿ, ಹಂಪಸಾಗರ

ಪ್ರತಿಗಳು :
1) ವಾದಿ + ಪ್ರತಿವಾದಿಗಳು
2) ತಾಲೂಕಾ ಕಛೇರಿ ಭೂಮಿ ಕೇಂದ್ರಕ್ಕೆ
3) ಹೆಚ್ಚುವರಿ ಪ್ರತಿ ಕಡತಕ್ಕೆ